INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,01-10
Peer Reviewed Journal, Referred Journal

# ಭಾರತೀಯ ಸಮಾಜ ಮತ್ತು ಅದರ ಮೇಲೆ ಇತರ ಸಂಸ್ಕೃತಿಗಳ ಪ್ರಭಾವ

ಶ್ರೀಮತಿ ಬಿಸ್ಮಿಲ್ಲಾಬೇಗಂ ಕಾಲಿಮಿರ್ಚಿ[1]

ಜಗತ್ತಿನಲ್ಲಿ ಸೃಷ್ಟಿಗೊಂಡಿರುವ ಪ್ರತಿಯೊಂದು ಸಮಾಜದಲ್ಲಿಯೂ ಅಭಿವೃದ್ಧಿ, ಪರಿವರ್ತನೆ, ಸ್ಥಿತ್ಯಂತರ ಮತ್ತು ಬದಲಾವಣೆಯಂಥ ಹೊಸತನಗಳು, ಆವಿಷ್ಕಾರಗಳು ಕಾಣಿಸಿಕೊಳ್ಳುತ್ತಿದ್ದಂತೆಯೇ ಭಾರತೀಯ ಚರಿತ್ರೆ ರಚನೆಯಲ್ಲೂ ಇವುಗಳ ಜೀವಂತಿಕೆಯನ್ನು ಕಾಣಲು ಆರಂಭಿಸಿತು. ತನ್ನ ಅಸ್ತಿತ್ವದ ಪ್ರಶ್ನೆಯೂ ಸಮಾಜ ಅಥವಾ ಸಮುದಾಯಗಳಿಗೆ ಮಾತ್ರವಲ್ಲದೇ ಚರಿತ್ರೆಗೂ ಅನ್ವಯಿಸುತ್ತದೆ. ಚರಿತ್ರೆಯು ಸಮಾಜದೊಂದಿಗೆ ಮುಖಾಮುಖಿಯಾದಾಗ ಮಾತ್ರವೇ ಅದು ಮಾನವ ಹಾಗೂ ಪ್ರಕೃತಿಯನ್ನು ಪ್ರತಿನಿಧಿಸಲು ಸಾಧ್ಯ. ಅದು ಸಾಮಾಜಿಕ ಸಂದರ್ಭದ ಕೂಡ ಚರಿತ್ರೆಯಲ್ಲಿ ಕಾಲಮಾನದ ವಿಷಯಗಳು ಒಂದೊಂದಾಗಿ ಬಯಲಿಗೆ ಬಂದು ನಿಲ್ಲಲು ಆರಂಭಿಸಿದ್ದವು. ಆವಾಗ ಈ ಪ್ರಕ್ರಿಯೆಯೂ ಜನಜಾಗೃತಿ ಮತ್ತು ಜನಮುಖಿ ಚರಿತ್ರೆಯ ನಿರ್ಮಾಣದ ಹಾದಿಯನ್ನು ಸುಲಭವಾಗಿಸಿತ್ತು. ಮತ್ತೆ ಇದಲ್ಲದೇ ಚರಿತ್ರೆಯಲ್ಲಿ ಯಾವ ವ್ಯವಸ್ಥೆಯೂ ಶಾಶ್ವತವಲ್ಲ ಎಂಬ ವಾಸ್ತವತೆಯ ಅರಿವನ್ನು ಕೂಡ ಮೂಡಿಸಿತು. ಜಗತ್ತಿನ ನೈಜಾ ಚರಿತ್ರೆಯೂ ಮಾನವಕುಲದ ಬದುಕಿನ ಚಿತ್ರಣವನ್ನು ನೀಡುವುದರಿಂದ ಅದು ಇಂದಿಗೂ ಜೀವಂತವಾಗಿದೆ. ಮಾನವ ಯಾವ ಸಂದರ್ಭದಲ್ಲಿ ಅಥವಾ ಯಾವ ಪ್ರದೇಶದಲ್ಲಿ ಜೀವಿಸಿದ್ದ ಎನ್ನುವುದಕ್ಕಿಂತ ಯಾವ ಬಗೆಯ ಬದುಕನ್ನು ನಡೆಸಿದನು ಎನ್ನುವುದು ಬಹುಮುಖ್ಯವಾಗುತ್ತದೆ. ಹೀಗಾಗಿ ಕುಟುಂಬ, ಸಮುದಾಯ ಹಾಗೂ ಪ್ರಭುತ್ವ ಎನ್ನುವ ಸಂಸ್ಥೆಗಳ ಚೌಕಟ್ಟಿನಲ್ಲಿ ಮಾನವನು ಹೊಂದಿರುವ ಅಂತರ ಸಂಬಂಧಗಳು ಇಲ್ಲಿ ಹೆಚ್ಚು ಮುಖ್ಯವಾಗುತ್ತವೆ. ಹಾಗೆಯೇ, ಇಲ್ಲಿ ಆಳ್ವಿಕೆ ನಡೆಸುವ ಶಕ್ತಿಗಳು ಯಾವತ್ತು ಸಂಸ್ಥೆಗಳಾಗಿಯೇ ಇರುತ್ತವೆ. ಇಂದಿನ ಅಲಕ್ಷಿತ ಅಂದರೆ, ಶೋಷಿತ ಸಮುದಾಯಗಳು ಈ ಸಂಸ್ಥೆಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬೇಕಾಗಿತ್ತು. ಅಲಕ್ಷಿತ ಸಮುದಾಯಗಳಿಗೆ ಸ್ವತಂತ್ರ ಅಸ್ತಿತ್ವವಿರುವುದಿಲ್ಲ ಹಾಗೂ ಅವು ಈಗಾಗಲೇ ಅಧಿಕಾರ ಹಾಗೂ ಸವಲತ್ತುಗಳ ಮೂಲಕ ಅಸ್ತಿತ್ವ ಕಂಡುಕೊಂಡ ವರ್ಗಗಳಿಗಾಗಿ ದುಡಿಯಬೇಕಾಗಿತ್ತು. ಇದು ಚರಿತ್ರೆಯನ್ನು ಜನರ ಚರಿತ್ರೆಯನ್ನಾಗಿ ವ್ಯಾಖ್ಯಾನಿಸುವಾಗ ಕಂಡುಬರುವ ವಾಸ್ತವಾಗಿದೆ. ಇದಕ್ಕೆ ಕಾಲ ಮತ್ತು ದೇಶಗಳ ಗಡಿಗಳಿರುವುದಿಲ್ಲ. ಇದು ಊಳಿಗಮಾನ್ಯ ಹಾಗೂ ಬಂಡವಾಳಶಾಹಿ ವ್ಯವಸ್ಥೆಗಳೆರಡರಲ್ಲೂ ಕಂಡುಬರುವ ಒಂದು ಸರ್ವೇಸಾಮಾನ್ಯವಾದಂಥ ಲಕ್ಷಣವೇ

1 .ಸಂಶೋಧನಾ ವಿದ್ಯಾರ್ಥಿ, ಡಾ.ಆ.ನೇ ಉಪಾಧ್ಯೆ ವಿಸ್ತರಣ ಕೇಂದ್ರ, ಭರತೇಶ ಶಿಕ್ಷಣ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಬೆಳಗಾವಿ.

ಆಗಿರುತ್ತದೆ. ಹೀಗಾಗಿ ಚರಿತ್ರೆಯನ್ನು ಅದು ಯಾರಿಗೊ ಸಂಬಂಧಿಸಿದ್ದು ಎಂಬುದಾಗಿ ದೂರದಿಂದ ನಿಂತು ನೋಡುವ ಅವಶ್ಯಕತೆಯಿಲ್ಲ. ಚರಿತ್ರೆ ಬೇರೆ ಬೇರೆ ಬಗೆಯ ಅನುಭವಗಳ ರೂಪದಲ್ಲಿ ಮಾನವನೊಂದಿಗೆ ಇರುವುದಷ್ಟೇ ಅಲ್ಲದೆ ಆ ಮಾನವನನ್ನು ಪ್ರತಿ ಹಂತದಲ್ಲಿಯೂ ಕ್ರಿಯಾಶೀಲವನ್ನಾಗಿ ವರ್ತಿಸುವಂತೆ ಮತ್ತು ಇರುವಂತೆ ಮಾಡುತ್ತಿರುತ್ತದೆ.

ಭಾರತೀಯ ಸಮಾಜವು ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಮತ್ತು ಭವ್ಯ ಪರಂಪರೆಯನ್ನು ಹೊಂದಿದೆ. ಇದು ಸಿಂಧೂ ನದಿ ಕಣಿವೆ ಸಂಸ್ಕೃತಿಯ ಕಾಲದಿಂದ ಅಥವಾ ಅದಕ್ಕೂ ಹಿಂದಿನಿಂದಲೂ ಈ ಸಮಾಜದ ಜೀವನ ಕ್ರಮ ಹಾಗೂ ಸಂಸ್ಕೃತಿಯಲ್ಲಿ ಒಂದು ಗಮನಾರ್ಹವಾದ ನಿರಂತರತೆಯು ಕಂಡುಬರುತ್ತಿದೆ. ಇದರಲ್ಲಿ ಮಾಧುರ್ಯ ಮತ್ತು ಸುಜ್ಞಾನದ ಸ್ಪಷ್ಟ ಪ್ರತಿಬಿಂಬವನ್ನು ಕಾಣಬಹುದಾಗಿದೆ. ಇದು ಸತ್ಯ, ಅಹಿಂಸೆ, ದಯೆ, ವಿಶ್ವಪ್ರೇಮ, ಹೃದಯ ವೈಶಾಲ್ಯ, ಔದಾರ್ಯ, ವಿಶಾಲ ಮನೋಭಾವ ಹಾಗೂ ವಿಶ್ವಾಸಪೂರ್ಣ ಆತಿಥ್ಯದಂಥ ಜೀವನೋದ್ಧಾರಕ ಮೂಲಭೂತ ಮೌಲ್ಯಗಳ ಸುಮಧುರ ಸವಿಯೂ ಮತ್ತು ತಿರುಳೂ ಆಗಿದೆ. ಇದರ ಜೊತೆಗೆಯೇ ರಚನಾತ್ಮಕವಾದಂಥ ಸಮಗ್ರ ಅರಿವು ಮತ್ತು ಆಧ್ಯಾತ್ಮಿಕ ಜ್ಞಾನಜ್ಯೋತಿಯ ಪ್ರತಿಫಲವೂ ಆಗಿದೆ. ಇದು ಇತರ ಸಮಾಜ ಹಾಗೂ ಸಂಸ್ಕೃತಿಗಳೊಂದಿಗೆ ಸಹಸಂಬಂಧ ಮತ್ತು ಸಂಪರ್ಕಗಳನ್ನು ಬೆಳೆಸಿಕೊಳ್ಳುತ್ತಾ ಬಂದಿದೆ. ಈ ಕಾರಣ ಮತ್ತು ಪರಿಣಾಮದಿಂದ ಇದು ಗತಿಶೀಲವಾಗಿ ಸಂಪದ್ಯುಕ್ತವಾಗಿದೆ. ಹಾಗೆಯೇ ಪ್ರತಿಯೊಂದು ವಿಭಿನ್ನ ಸಮುದಾಯಗಳು ಅವುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಈ ನಾಡಿಗೆ ಬಂದವು. ಅವುಗಳೆಲ್ಲವೂ ಈ ಬೃಹತ್ ಸಮಾಜದಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಯೋಗ ಶಾಲೆಯಲ್ಲಿ ಬದಲಾವಣೆಗೆ ಒಳಗಾದವು ಹಾಗೂ ಈ ಸಮಾಜ ಸಂಸ್ಕೃತಿಗೆ ತಮ್ಮ ಕೊಡುಗೆಗಳನ್ನು ಅಪಾರವಾಗಿಯೇ ನೀಡಿರುತ್ತವೆ.

ಮಾನವನು ಸಂಘಜೀವಿ, ಹಾಗೆಯೇ, ಸಮಾಜ ಮತ್ತು ಸಮುದಾಯ ಜೀವಿಯೂ ಕೂಡ ಆಗಿರುತ್ತಾನೆ ಎಂದು ಹಲವು ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಅಭಿಪ್ರಾಯಿಸಿದ್ದಾರೆ. ಮಾನವ ಕುಲವು ಆದಿಮಾನವನ ಅರಣ್ಯವಾಸದ ಕಾಲದಿಂದಲೂ ತನ್ನ ಸಮುದಾಯದೊಟ್ಟಿಗೆ ಅಲೆದಾಟ, ಆಹಾರ ಹುಡುಕಾಟ, ಹಾಗೂ ಅನುಕೂಲಕರವಾದ ಸ್ಥಳಗಳಲ್ಲಿ ನೆಲೆಗೊಂಡು, ಆಡುವ, ಕುಣಿಯುವ ಮತ್ತು ಹಲವರನ್ನೂ ಜೊತೆಗೂಡಿ ಬದುಕುವುದನ್ನು ರೂಪಿಸಿ, ಅದನ್ನು ರೂಢಿಸಿ ಬೆಳೆಸಿಕೊಂಡು ಬಂದಿರುವುದನ್ನು ಗುರುತಿಸಬಹುದು. ಕಾಲಗತಿಸಿದಂತೆ ಅವನ ಬದುಕಿನ ಕ್ರಮ ಹಾಗೂ ಆಲೋಚನಾ ಕ್ರಮಗಳಲ್ಲಿ, ಆವಿಷ್ಕಾರಗಳಲ್ಲಿ ಹೊಸತನಗಳು ಕಾಣಿಸಿಕೊಂಡವು. ಮಾನವನ ಬದುಕಿನ ಕಾರ್ಯಚಟುವಟಿಕೆ, ಚಿಂತನೆಗಳು, ಭಾಷೆಯ ಕಲಿಕೆಯಂಥ ಪ್ರಾಯೋಗಿಕ ಗುಣಗಳಿಂದ ಬೇರೆ ಜೀವಿಗಳಿಗಿಂತ ಭಿನ್ನವಾಗಿ ಬದುಕಲಾರಂಭಿಸಿದ. ತನ್ನ ಬದುಕನ್ನು ಒಂದು ಶಿಸ್ತುಬದ್ಧ ನಿಯಮಗಳಡಿ

ರೂಪಿಸಿಕೊಳ್ಳಲು ಹಲವಾರು ನಿಯಮಗಳನ್ನು ಹಾಕಿಕೊಂಡನು. ಇವುಗಳೆಲ್ಲದರ ಕ್ರೂಢೀಕರಣವೇ ಸಂಸ್ಕೃತಿಯಾಗಿದೆ.

ಭಾರತೀಯ ಸಮಾಜ ಮತ್ತು ಸಂಸ್ಕೃತಿ ಸ್ವತಃ ಸತ್ವಯುತವಾದದ್ದು. ಎಲ್ಲ ಕಾಲದಲ್ಲೂ ವಾಸ್ತವ ಜೀವಂತಿಕೆಯ ಲಕ್ಷ್ಮಣ ತೋರುತ್ತ ಬಂದಿದೆ. ನಮ್ಮ ಪ್ರಾಚೀನ ಪರಂಪರೆಯ ನಮ್ಮ ಜನಜೀವನಕ್ಕೆ ತನ್ನದೇ ಆದ ರೂಪುಕೊಟ್ಟಿದೆ. ನೈತಿಕ ಮತ್ತು ಆಧ್ಯಾತ್ಮಿಕ ಬಲಗಳೆ ಅದರ ಬುನಾದಿ. ಉನ್ನತ ವಾಸ್ತವತೆಯನ್ನು ಅರಿಯುವ ಆಂತರಿಕ ತುಡಿತವೇ ನಮ್ಮ ಸಂಸ್ಕೃತಿಯ ಚಾಲನ ಶಕ್ತಿ ಭಾರತೀಯ ಸಂಸ್ಕೃತಿಯಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಜೀವನ ಅವಿನಾಭಾಜ್ಯವಾಗಿ ಸೇರಿಕೊಂಡಿದೆ. ಭಾರತೀಯ ಸಂಸ್ಕೃತಿಯಲ್ಲಿ ಮತ್ತು ಸಮಾಜದಲ್ಲಿ ವ್ಯಕ್ತಿಗೆ ಹೆಚ್ಚಿನ ಸ್ವಾತಂತ್ರ್ಯವಿದ್ದು, ಆತ ಪ್ರಗತಿಯನ್ನು ಸಾಧಿಸಲು ಸಾಕಷ್ಟು ಅವಕಾಶಗಳೂ ಕೂಡ ಇರುವುದರಿಂದ ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳು ಇತರ ಸಂಸ್ಕೃತಿಗಳಂತೆ ವಿನಾಶದ ಹಾದಿಯಲ್ಲಿ ಸಾಗಲಾರವು. ಭರತ ಖಂಡದಲ್ಲಿ ಒಂದೇ ಜನತೆ, ಒಂದೇ ಸಂಸ್ಕೃತಿ ಇದೆಯೆಂದು ಪುರಾಣಗಳು ಘೋಷಿಸಿವೆ. “ಭಾರತಿ ಯಂತ್ರ ಸಂತತಿ” ಚಾರಿತ್ರಿಕ ಘಟನೆಗಳನ್ನು ಅನುಸರಿಸಿ ಅನೇಕ ವಿದೇಶಿಯ ಜಾತಿಗಳವರು ಭಾರತಕ್ಕೆ ಬಂದು ಇಲ್ಲಿನವರಲ್ಲಿ ಸಮ್ಮಿಳತರಾಗಿರುವರು. ಅನೇಕ ಭಾಷಾ ವರ್ಗಗಳು ಹರಡಿಕೊಂಡಿರುವುದು ಅನೇಕ ನಾಗರೀಕತೆಗಳು ತಮ್ಮ ತಮ್ಮ ಪ್ರಭಾವಗಳನ್ನು ತೋರಿಸಿವೆ. ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಅನೇಕ ವಿಶಿಷ್ಟ ಲಕ್ಷಣಗಳನ್ನು ಆರ್ಥಿಕ ವ್ಯವಸ್ಥೆಯಲ್ಲಿ ವಿವಿಧ ಹಂತಗಳನ್ನು ವಿಧವಾದ ಅಂಶಗಳನ್ನೆಲ್ಲ ಕ್ರೋಢೀಕರಿಸಿಕೊಂಡು ಮತ್ತು ಅವುಗಳೆಲ್ಲವನ್ನೂ ಜೀರ್ಣಿಸಿಕೊಂಡು ಸರಿಸುಮಾರು ಹತ್ತು ಸಾವಿರ ವರ್ಷದಿಂದ ಅಖಂಡ ಪ್ರವಾಹದಂತೆ ಹರಿಯುತ್ತಿರುವ ಭವ್ಯ ಪರಂಪರೆಯನ್ನು ಹೊಂದಿರುವಂಥ ಭಾರತೀಯ ಸಂಸ್ಕೃತಿಯು ಒಂದು ಅಪೂರ್ವವಾದ ಸಮಗ್ರತೆಯನ್ನು ಮತ್ತು ಐಕ್ಯತೆಯನ್ನು ಸಾಧಿಸಿದೆ.

“ಸಂಸ್ಕೃತಿ” ಎಂಬುದು ಜೀವನ ವಿಧಾನವಾಗಿರುವುದರಿಂದ ಅದು ಇಲ್ಲಿರುವರ ಮೂಲಭೂತ ಅವಶ್ಯಕತೆಯನ್ನು ಪೂರೈಸುವುದರೊಂದಿಗೆ ಜೀವನವನ್ನು ಅತ್ಯಂತ ಮಾನವೀಯ ಕೇಂದ್ರ ನೆಲೆಯಿಂದ ನಿರ್ದೇಶಿಸುತ್ತದೆ. ಈ ನೆಲೆಯಲ್ಲಿ ಗುರುತಿಸಬಹುದಾದ ಈ ಧರ್ಮಕ್ಕೆ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ, ವೀರಶೈವ ಎಂಬ ಯಾವ ಹೆಸರು ಕಾಣುವುದಿಲ್ಲ. ಅದೊಂದು ಮಾನವತೆಯ ಪರಮತತ್ವ ಅದನ್ನೇ ನಾವು ಇದನ್ನು ಹೊರತುಪಡಿಸಿದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಆರೋಗ್ಯದಾಯಕ ಜೀವನವು ಭಿನ್ನವಾಗುತ್ತ ಸಾಗಿದೆ. ಆದರೂ ಇಂದು ಪ್ರತಿ ವ್ಯಕ್ತಿತ್ವ ಹಾಗೂ ಸಾಮಾಜಿಕ ಜೀವನವು ಯಾವುದೋ ಒಂದು ಧರ್ಮದ ಪ್ರಭಾವದಲ್ಲಿ ಸಾಗಿರುವುದರಿಂದ ಇಲ್ಲಿಯ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳಿಗೆ ಆಯಾ ಧರ್ಮ, ಪ್ರಸ್ತುತ ರಾಜಕಾರಣ, ಸಾಮಾಜಿಕ ಜೀವನ, ಶಿಕ್ಷಣ ಪದ್ಧತಿ, ಆರ್ಥಿಕ ನೀತಿ, ಸಮೂಹ ಮಾಧ್ಯಮಗಳು, ಆಧುನಿಕತೆ ಹಾಗೂ ಭೌಗೋಳಿಕ ಪರಿಸರ ಕಾರಣಗಳಾಗಿರುವುದನ್ನು ಅರಿಯಬಹುದು. ಅನೇಕ ಪ್ರಾಚೀನ ಸಂಸ್ಕೃತಿಗಳು ಹುಟ್ಟಿ ಸತ್ತವು

ಎಂದು ಚರಿತ್ರೆ ಹೇಳುತ್ತವೆ. ಆದರೆ ಭಾರತ ಸಮಾಜ ಮತ್ತು ಸಂಸ್ಕೃತಿಗಳು ಹಳೆಯದನ್ನು, ಹೊಸದನ್ನು, ಪೌರ್ವಾತ್ಯವನ್ನು, ಪಾಶ್ಚಾತ್ಯವನ್ನು, ಆಧ್ಯಾತ್ಮವನ್ನು, ಆಧಿಭೌತಿಕವನ್ನು, ಪ್ರಗತಿಯನ್ನು, ಪುರಾತನ ಮೌಲ್ಯವನ್ನು ಸಮನ್ವಯ ಮಾಡಿಕೊಂಡು ತನ್ನ ವ್ಯಕ್ತಿತ್ವನ್ನು ವೈಶಿಷ್ಟ್ಯವನ್ನು ರಕ್ಷಿಸಿಕೊಂಡು ಪ್ರಹಿಸುವುದು ಭಾರತೀಯ ಸಮಾಜ ಮತ್ತು ಸಂಸ್ಕೃತಿಯು ಅನನ್ಯತೆಯಾಗಿದೆ.

ಮಾನವ ಮತ್ತು ಮಾನವೇತರ ಜೀವಿಗಳಗೂ ತಮ್ಮದೇ ಆದ ಸಂಸ್ಕೃತಿ ಇದ್ದೇ ಇದೆ. ಆದರೆ ಸಂಸ್ಕೃತಿಯನ್ನು ಕುರಿತು ಸೂಕ್ಷ್ಮವಾಗಿ ಅವಲೋಕಿಸಿದಾಗ, ಭಾಷೆ, ಭಾವನಾತ್ಮಕತೆ, ಬೌದ್ಧಿಕತೆ ಮತ್ತು ಸ್ಮೃತಿಸಾಗಣೆಯ ಕಾರಣದಿಂದಾಗಿ ಮಾನವನು ಇತರ ಜೀವಿಗಳಗಿಂತ ಭಿನ್ನ ಎಂಬುದನ್ನು ಗುರ್ತಿಸಬಹುದಾಗಿದೆ. ಅಲ್ಲದೇ ಈಗಾಗಲೇ ಪ್ರಾಚೀನ ಕಾಲದಿಂದ ಇಂದಿನ ವರೆಗಿನ ವಿದ್ವಾಂಸರಿಂದ 'ಸಂಸ್ಕೃತಿ'ಯು 'ವ್ಯಕ್ತಿ ಸಂಸ್ಕೃತಿ'ಯಿಂದ 'ವಿಶ್ವ ಸಂಸ್ಕೃತಿ' 'ದೇವಸಂಸ್ಕೃತಿ'ಯವರೆಗೂ ವ್ಯಷ್ಠಿಯಿಂದ ಸಮಷ್ಠಿಯ ನೆಲೆಗಳಲ್ಲಿ ಪರಿಭಾವಿಸಲ್ಪಟ್ಟಿದೆ. ವ್ಯಕ್ತಿ, ಕುಟುಂಬ, ಜಾತಿ, ಪ್ರದೇಶ, ಭಾಷೆ, ನಡವಳಿಕೆ, ನುರಿತ ಕಾಯಕ ಕ್ಷೇತ್ರಗಳಂಥವುಗಳ' ಇರುವಿಕೆ, ಆಗುವಿಕೆ, ಮಾಗುವಿಕೆ ಮತ್ತು ಸಾಗುವಿಕೆಯ ಮೂಲಕ ಬಹುಸಂಸ್ಕೃತಿ ಮತ್ತು ಆ ನೆಲೆಯ ಸಾಂಸ್ಕೃತಿಕ ಅನನ್ಯತೆಗಳು ಅಸ್ತಿತ್ವ ಪಡೆದುಕೊಂಡಿವೆ.

**ಸಮಾಜ ಮತ್ತು ಸಂಸ್ಕೃತಿ**

ಒಂದು ಸಮಾಜವನ್ನು ಮಾನವರೊಳಗಣ ಪರಸ್ಪರ ಸಂಬಂಧಗಳ ಒಂದು ವ್ಯವಸ್ಥೆ ಎಂದು ವಿವರಿಸಬಹುದು. ಪರಸ್ಪರ ಸಂಬಂಧಗಳು ಮಾನವ ಸಮಾಜದ ನಿರ್ಮಾಣಕ್ಕೂ ಪೋಷಣೆಗೂ ಅತ್ಯಾವಶ್ಯಕ. ಇವು ಮಾನವನ ಸಮಸ್ಯೆಗಳವೆ ಅಂತೆಯೇ ಅವನ ಸಮಸ್ಯಾ ಪರಿಹಾರಕ್ಕೂ ಆಕರಗಳಾಗಿವೆ. ಸಂಬಂಧಗಳು ವ್ಯಕಿ-ವ್ಯಕ್ತಿಗಳ ನಡುವೆ, ವ್ಯಕ್ತಿ ಗುಂಪಿನ ನಡುವೆ, ಗುಂಪು-ಗುಂಪಿನ ನಡುವೆ ಏರ್ಪಡುತ್ತವೆ. ವ್ಯಕ್ತಿ-ವ್ಯಕ್ತಿಯೊಳಗಣ ಪರಸ್ಪರ ಸಂಬಂಧಗಳು ಅವರವರು ಕೈಗೊಳ್ಳುವ ಕ್ರಿಯೆಗನುಗುಣವಾಗಿ ನಿರ್ಮಾಣವಾಗುತ್ತವೆ. ವ್ಯಕ್ತಿಯ ಸ್ಥಾನ, ಅವನ ಕಾರ್ಯರಂಗ, ಹೊಣೆಗಾರಿಕೆ, ಪಾತ್ರ ಇವೆಲ್ಲವೂ ಅವನು ಇತರರೊಡನೆ ಈಗಾಗಲೇ ಇರಿಸಿಕೊಂಡಿರುವ ಮತ್ತು ಇನ್ನು ಮುಂದೆ ಬೆಳೆಸಿಕೊಳ್ಳಬೇಕಾಗಿರುವಂತಹ ಸಂಬಂಧಗಳ ರೂಪವನ್ನು ನಿರ್ಣಯಿಸುವುದರಲ್ಲಿ ಪರಿಣಾಮಕರವಾದ ಪಾತ್ರಗಳನ್ನು ವಹಿಸುತ್ತವೆ. ಹೀಗೆ ಸೃಷ್ಟಿಯಾದ ಸಂಬಂಧಗಳು ಅನೇಕ ವ್ಯಕ್ತಿಗಳನ್ನು ಒಂದೊಂದು ತೆರನಾದ ಸಂಬಂಧಗಳ ಬಲೆಯಲ್ಲಿ ಬಂಧಿಸುತ್ತವೆ. ಇದರ ಜೊತೆ ಜೊತೆಗೆ ಈ ಬಂಧನಗಳ ಬಲೆಯಲ್ಲಿಯ ಜನರು ಅನೇಕ ಗುಂಪುಗಳಾಗಿ ವಿಂಗಡಿಸಲ್ಪಡುತ್ತಾರೆ. ಅನೇಕರು ಗುಂಪುಗಳಾಗಿ ಒಟ್ಟಾಗುತ್ತಾರೆ. ಜನರು ಗುಂಪಾಗುವ ವಿವಿಧ ಗುಂಪುಗಳಾಗಿ ಒಡೆದು ಹೋಗುವ ಪ್ರಕ್ರಿಯೆಗಳಲ್ಲಿ ವ್ಯಕ್ತಿಗಳ ಕ್ರಿಯೆ- ಪ್ರಕ್ರಿಯೆಗಳಿಗೆ ಮಹತ್ವದ ಸ್ಥಾನವಿದೆ. ಜನರ ಗುಂಪುಗಳು, ವ್ಯಕ್ತಿಗಳಂತೆ ಪರಸ್ಪರವಾಗಿ ಸಂಬಂಧಗಳನ್ನು ಬೆಳೆಸಿಕೊಂಡು ತುಡಿತ ಸ್ಥಿತಿಯಲ್ಲಿ ವ್ಯವಹರಿಸುತ್ತವೆ. ಈ ಗುಂಪುಗಳು

ವ್ಯಕ್ತಿಗಳೊಡನೆಯೂ ಸಂಬಂಧವನ್ನು ಹೊಂದಿರುತ್ತವೆ. ಗುಂಪಿನ ಸದಸ್ಯ ಇತರ ಸದಸ್ಯರೊಡನೆ ಹೊಂದಿರುವಂತೆ ಇಡೀ ಗುಂಪಿನೊಡನೆಯೂ ಅದಕ್ಕೆ ತಕ್ಕುದಾದ ಸಂಬಂಧವನ್ನು ಇರಿಸಿಕೊಳ್ಳುತ್ತಾನೆ.

ಜನರು ಹಲವು ಹತ್ತು ರೂಢಿ ಮೂಲಗಳ ಪ್ರಕಾರ ತಮ್ಮ ತಮ್ಮ ನಡವಳಿಕೆಗಳನ್ನು ಅಳವಡಿಸಿಕೊಂಡು ಜೀವಿಸುತ್ತಾರೆ. ಸಮಾಜದ ವ್ಯವಸ್ಥೆಯು ಜನರ ಸ್ವಾತಂತ್ರ್ಯ ರಕ್ಷಣೆ ಮಾಡಿದಂತೆ ಅವರ ಸ್ವೇಚ್ಛಾಚಾರಕ್ಕೆ ತಡೆಯನ್ನು ಒಡ್ಡುತ್ತದೆ. ಹೀಗೆ ಹಲವಾರು ವಿಧಿ ನಿಷೇಧಗಳ ಸಂಬಂಧಗಳಿಂದ ಕೂಡಿದ ಜೀವನವು ಒಂದು ಜೇಡನ ಬಲೆಯಂತಿರುವುದನ್ನು ಅರಿಯಬಹುದು. ಆದರೆ ಸಮಾಜವು ಸದಾ ಬದಲಾಗುತ್ತಿರುವ ಒಂದು ವ್ಯವಸ್ಥೆ. ಬದಲಾವಣೆಯು ಅಸ್ಪಷ್ಟವಾಗಿಯೂ ಸಾಗುತ್ತದೆ. ಸುಸ್ಪಷ್ಟವಾಗಿಯೂ ಪ್ರಕಟವಾಗುತ್ತದೆ. ಪರಂಪರೆಯು ಹಿನ್ನೆಲೆಯಾಗಿದ್ದರೂ ನೂತನ ರೂಪವನ್ನು ಪಡೆಯುವಂತಹ ಚಿರನೂತನ ವ್ಯವಸ್ಥೆಯಾದ ಸಮಾಜವು ಒಂದು ಪ್ರಕ್ರಿಯೆ ಎಂಬುದರ ಬಗ್ಗೆ ಸಮಾಜಶಾಸ್ತ್ರಜ್ಞರು ಒಮ್ಮತವುಳ್ಳವರಾಗಿದ್ದಾರೆ. ಸಮುದಾಯವು ಒಂದು ದೃಷ್ಟಿಯಲ್ಲಿ, ಸಮಾಜದ ಪ್ರಕಟರೂಪ. ಏಕೆಂದರೆ ಅದು ಸಮಾಜಕ್ಕೆ ಭೌತಕವಚವನ್ನು ಸಾಧಾರಣವಾಗಿ ಒದಗಿಸಿಕೊಡುತ್ತದೆ. ಸಮುದಾಯದೊಳಗೆ ಸಮಾಜವೋ, ಸಮಾಜದೊಳಗೆ ಸಮುದಾಯವೋ ಎಂಬ ವೈಜ್ಞಾನಿಕ ಶಂಕೆ ಸಹಜವಾಗಿ ಏಳುತ್ತದೆ. ಆದರೆ ಸಮುದಾಯದ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇವುಗಳನ್ನು ಸಾಮಾನ್ಯ ಗುರಿಗಳನ್ನಾಗಿಸಿಕೊಂಡಿರುವ ಸಮಾಜಕಾರ್ಯಕರ್ತನು ಸೈದ್ಧಾಂತಿಕ ಗಲಭೆಗೆ ಒಳಗಾಗುವುದು ಕಡಿಮೆ.

ಸಮಾಜವು ಮಾನವರ ಸರ್ವತೋಮುಖ ಸಂಬಂಧಗಳ ಬಲೆಯಾದುದರಿಂದ ಪ್ರತಿಯೊಂದು ಎಳೆಯೂ ಬಲಯುತವೂ, ಸೌಖ್ಯಕ್ಕೆ ದಾರಿಯನ್ನು ತೋರಿಸುವಂತದ್ದೂ ಆಗಬೇಕು ಎಂಬುದು ಸಮಾಜ ಕಾರ್ಯಕರ್ತನ ಹಂಬಲ. ಇದಕ್ಕೆಂದೇ ಅವನು ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ತಿಕ್ಕಾಟಗಳನ್ನು, ಕ್ಲಿಷ್ಟ ಪರಿಸ್ಥಿತಿಗಳನ್ನು ಪ್ರಮುಖವಾಗಿ ಗಣನೆಗೆ ತೆಗೆದುಕೊಂಡು ರೋಗನಿದಾನದ ಕಾರ್ಯ ಕೈಗೊಳ್ಳುತ್ತಾನೆ. ವ್ಯಕ್ತಿ, ಗುಂಪು ಮತ್ತು ಅವರೊಳಗೆ ಹೊಮ್ಮುವ ಪರಸ್ಪರ ಸಂಬಂಧಗಳು ಹೇಗೆ ಬದಲಾವಣೆಯ ಪ್ರಕ್ರಿಯೆಯಲ್ಲಿ ಚಿಂತಾಜನಕ ಸ್ಥಿತಿಗೆ ಒಳಗಾಗುತ್ತವೆ ಎಂಬುದನ್ನು ಪ್ರಮುಖವಾಗಿ ಕಂಡುಕೊಳ್ಳುತ್ತಾನೆ.

ಭಾರತದ ಸಮಾಜ ಮತ್ತು ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಇಂದು ಗುರುತಿಸಲ್ಪಡುವ ಎರಡು ಪ್ರಮುಖ ಸಾಂಸ್ಕೃತಿಕ ವ್ಯವಸ್ಥೆಗಳೆಂದರೆ, ದ್ರಾವಿಡ ಸಂಸ್ಕೃತಿ ಮತ್ತು ಆರ್ಯ ಸಂಸ್ಕೃತಿ. ದ್ರಾವಿಡ ಸಂಸ್ಕೃತಿ ಆರ್ಯ ಸಂಸ್ಕೃತಿಗಿಂತ ಪುರಾತನವಾಗಿದ್ದು, ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ. ಅದರ ಜೊತೆಗೆ ತದನಂತರ ಆರ್ಯ ಸಂಸ್ಕೃತಿಯ ಅನೇಕ ಅಂಶಗಳು ಇದರ ಮೇಲೆ ಪ್ರಭಾವ ಬೀರಿವೆ. ಅದು ದ್ರಾವಿಡ ಸಂಸ್ಕೃತಿಯೊಡನೆ ಬೆರೆತು ಹೋಗಿ ಮೂಲ ಸಂಸ್ಕೃತಿ ಎಂಬಂತೆ ಕಾಣಿಸಿಕೊಳ್ಳತೊಡಗಿದೆ. ಇತ್ತೀಚೆಗೆ ಅನೇಕ ಸ್ಥಿತ್ಯಂತರಗಳು ಸಾಂಸ್ಕೃತಿಕ ವ್ಯವಸ್ಥೆಗಳು ಇವುಗಳ ಮೇಲೆ

ಪ್ರಭಾವವನ್ನು ಬೀರಿರುವುದನ್ನು ಕಾಣಬಹುದು. ಹೀಗೆ ಸಂಸ್ಕೃತಿ ಎನ್ನುವುದು ಬದಲಾಗುತ್ತಾ ಬದಲಾವಣೆಗೆ ಒಳಗಾಗುತ್ತಾ ಸಾಗುತ್ತಿರುತ್ತದೆ.

ಮೊದಲಿನಿಂದಲೂ ಭಾರತೀಯ ಸಮಾಜದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ವೈಶಿಷ್ಟ್ಯತೆಯನ್ನು ಕುರಿತಂತೆ ಅಧ್ಯಯನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ವೇದ, ಉಪನಿಷತ್ತು, ಮಹಾಕಾವ್ಯ, ಪುರಾಣ, ಧರ್ಮಶಾಸ್ತ್ರಗಳಲ್ಲಿ ಆಯಾಯ ಕಾಲ ಸಮಾಜದ ಸ್ಥಿತಿಗತಿಗಳ ಚಿತ್ರಣವನ್ನು ನೋಡಬಹುದು. ಎಲ್ಲಾ ಸಮಾಜಶಾಸ್ತ್ರಜ್ಞರೂ, ಮಾನವೀಯ ವಿಜ್ಞಾನಿಗಳು ಈ ಸಮಾಜದ ಅಧ್ಯಯನದಲ್ಲಿ ಆಸಕ್ತಿ ತೋರುತ್ತಾ ಬಂದಿದ್ದಾರೆ. ಹೆಚ್ಚು ಕಡಿಮೆ ಎಲ್ಲರೂ ಗ್ರಾಮ ಸಮುದಾಯ, ಅವಿಭಕ್ತ ಕುಟುಂಬ, ಆಶ್ರಮ ಹಾಗೂ ವರ್ಣವ್ಯವಸ್ಥೆ ಇದರ ಮೂಲಸ್ತಂಭಗಳೆಂಬುದಾಗಿ ಎಣಿಸಿದ್ದಾರೆ.

ಗ್ರಾಮ ಸಮುದಾಯ ಸರ್ವವಿಧದಲ್ಲೂ ಸ್ವಯಂಪೂರ್ಣವಾಗಿದ್ದ ವ್ಯವಸ್ಥೆಯಾಗಿದೆ. ೩–4 ತಲೆಮಾರುಗಳ ರಕ್ತ ಹಾಗೂ ವೈವಾಹಿಕ ಸಂಬಂಧಗಳನ್ನು ಹೊಂದಿದ್ದ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಹಿರಿಯರಿಗೆ ಹೆಚ್ಚಿನ ಜವಾಬ್ದಾರಿ, ಕಿರಿಯರಿಗೆ ಒಳ್ಳೆಯ ರಕ್ಷಣೆ, ಆರೋಗ್ಯಕರ ಶ್ರಮ ವಿಭಜನೆ ಇರುತ್ತಿದ್ದಿತು. ಈಗ ಆಧುನಿಕ ಶಕ್ತಿಗಳ ಕಾರಣ ಈ ಎರಡೂ ರಚನೆಗಳು ತೀವ್ರ ಬದಲಾವಣೆಗಳಿಗೆ ಒಳಗಾಗಿವೆ. ಆಶ್ರಮ ಧರ್ಮದ ಪ್ರಕಾರ ಒಬ್ಬ ವ್ಯಕ್ತಿಯ ಆದರ್ಶ ಜೀವನವನ್ನು ಬ್ರಹ್ಮಚರ್ಯ, ಗೃಹಸ್ತ, ವಿರಕ್ತ, ಏಕಾಂತವಾಸಿ ಮತ್ತು ಸನ್ಯಾಸಿ ಎಂಬ ನಾಲ್ಕು ಅನುಕ್ರಮವಾದ ಹಂತಗಳಾಗಿ ವಿಭಾಗಿಸಲಾಗಿದೆ. ಈ ಹಂತಗಳು ವ್ಯಕ್ತಿಯ ಆದರ್ಶಾತ್ಮಕ ಜೀವನದ ಪ್ರಗತಿಪಥವನ್ನು ಸೂಚಿಸುತ್ತದೆ. ವರ್ಣ ಎಂದರೆ ಬಣ್ಣ ಎಂದೂ ಮತ್ತೂ ಧರ್ಮ ಎಂದರೆ ವ್ಯಕ್ತಿಗೆ ಹುಟ್ಟಿನಿಂದ ಬಂದಿರುವ ವಿಶಿಷ್ಟ ಯೋಗ್ಯತೆ ಹಾಗೂ ಅದಕ್ಕೆ ಅನುಗುಣವಾದ ಕರ್ತವ್ಯ ಎಂದೂ ಅರ್ಥೈಸಲಾಗಿದೆ. ಹೀಗೆ ವರ್ಣ ವ್ಯವಸ್ಥೆ ವ್ಯಕ್ತಿಯ ಸಂಸ್ಕಾರ, ಸ್ವಭಾವ ಸಹಜ ಸಾಮರ್ಥ್ಯ, ಅಭಿರುಚಿಗಳಿಗೆ ಸಂಬಂಧಪಟ್ಟಿದೆ. ಆದರೆ ಐತಿಹಾಸಿಕ ಮತ್ತಿತರ ಕಾರಣಗಳಿಂದಾಗಿ ಈ ಆರೋಗ್ಯಕರ, ಪ್ರಗತಿಪರ ವರ್ಣ ವ್ಯವಸ್ಥೆಯು ಏಕತೆ ಹಾಗೂ ಸಮರಸ ಜೀವನಕ್ಕೆ ಮಾರಕವಾದ ಜಾತಿಪದ್ಧತಿಯಾಗಿ ಮಾರ್ಪಟ್ಟಿತು. ಜಾತಿಯು ಸಾಮಾಜಿಕ ಸ್ತರ ವಿನ್ಯಾಸದ ಒಂದು ರೂಪ.

ಯಾವ ಸಮಾಜದಲ್ಲೂ ಎಂದಿಗೂ ಎಲ್ಲಾ ಸದಸ್ಯರು ಸರ್ವ ವಿಧದಲ್ಲೂ ಸಮಾನರಾಗಿರುವುದು ಸಾಧ್ಯವಿಲ್ಲ. ಲಿಂಗ, ವಯಸ್ಸು, ವೈಯಕ್ತಿಕ ಶಕ್ತಿ ಸಾಮರ್ಥ್ಯ, ವೃತ್ತಿ ಇತ್ಯಾದಿಗಳ ಅನ್ವಯ ಸಮಾಜದ ಸದಸ್ಯರಿಗೆ ಬೇರೆ ಬೇರೆ ಅಂತಸ್ತುಗಳನ್ನು ನೀಡಿ, ವಿಭಿನ್ನ ಪಾತ್ರಗಳನ್ನು ನಿರ್ವಹಿಸುವಂತೆ ಮಾಡಿ ಅವರನ್ನು ವಿವಿಧ ಸ್ತರಗಳನ್ನಾಗಿ ವರ್ಗೀಕರಿಸುವ ವ್ಯವಸ್ಥೆಯನ್ನು ಸಾಮಾಜಿಕ ಸ್ತರ ವಿನ್ಯಾಸ ಕೇವಲ ಮಿಥ್ಯ ಎಂಬುದಾಗಿ ಹೇಳಿದ್ದಾರೆ. ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ಹಾಗೆಯೇ ಸಾರ್ವತ್ರಿಕ ಸ್ವರೂಪದ ವರ್ಗ ವ್ಯವಸ್ಥೆಯನ್ನು ಪಾಶ್ಚಿಮಾತ್ಯ ಸಮಾಜಗಳಲ್ಲಿ ಹಾಗೂ ಇನ್ನಿತರ ಆಧುನಿಕ ಸಮಾಜಗಳಲ್ಲಿ ಕಾಣಬಹುದು. ಇಂತಹ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿರುವ ಸಂಸ್ಕೃತಿಯನ್ನು ಕುರಿತು ಅಧ್ಯಯನಗಳು ಸಂಶೋಧನೆಗಳು ನಡೆಯುತ್ತಿವೆ, ಅನೇಕ ರೀತಿಯಲ್ಲಿ ನಡೆದಿವೆ. ಈ

ವ್ಯಾಪ್ತಿಯಲ್ಲಿ ನೋಡುವುದಾದರೆ ಸಮಾಜದಲ್ಲಿನ ಎಲ್ಲಾ ವ್ಯವಸ್ಥೆಯನ್ನು ಇದರ ಅಡಿಯಲ್ಲಿ ತರಲಾಗಿದೆ. ಪ್ರತಿಯೊಂದು ಜಾತಿ, ಸಮುದಾಯ, ಭಾಷೆ, ನಂಬಿಕೆ, ಆಚರಣೆ, ಸಂಪ್ರದಾಯ ಹೀಗೆ ಪ್ರತಿಯೊಂದನ್ನು ಅಧ್ಯಯನ ಮಾಡಲಾಗುತ್ತದೆ. ಸಮಾಜದಲ್ಲಿನ ಪ್ರತಿಯೊಂದು ವ್ಯವಸ್ಥೆಯೂ ಇದರ ವ್ಯಾಪ್ತಿಗೆ ಬರುತ್ತದೆ. ವೈಜ್ಞಾನಿಕವಾಗಿ, ವಿಚಾರಬದ್ಧವಾಗಿ, ಸತ್ಯಶೋಧನದಿಂದ ನೋಡುವುದೇ ಇದರ ಗುರಿ. ಹಿಂದೂ ಸಂಸ್ಕೃತಿ ಎಂಬ ಬೃಹತ್ ಕಲ್ಪನೆಯಿಂದ ಹಿಡಿದು ಸಣ್ಣಪುಟ್ಟ ಜಾತಿ ಬುಡಕಟ್ಟುಗಳವರೆಗೆ ಪ್ರತಿಯೊಂದನ್ನೂ ಎಲ್ಲೆಯೊಳಗೆ ಅಧ್ಯಯನ ಮಾಡಲಾಗುತ್ತಿದೆ. ಹೀಗೆ ಅತ್ಯಂತ ಸೂಕ್ಷ್ಮವಾಗಿ ಸಮಾಜವನ್ನು ನೋಡುವ ಪ್ರಕ್ರಿಯೆಯಾಗಿದೆ.

ಸಂಸ್ಕೃತಿ ಮುಖ್ಯವಾಗಿ ಮನುಷ್ಯ ಸಮಾಜಕ್ಕೆ ಸಂಬಂಧಪಟ್ಟಿದ್ದು ವಿವೇಚನಾ ಶಕ್ತಿಯನ್ನು ಅವಲಂಬಿಸಿರುವುದರಿಂದ ಸಂಸ್ಕೃತಿ ಮಾನವ ವರ್ಗಕ್ಕೆ ಮಾತ್ರ ಅನ್ವಿತವಾದದು. ಭಾವಗಳು, ಧ್ಯೆಯಗಳು, ಬೆಲೆ, ಸೌಂದರ್ಯ, ನ್ಯಾಯ ಮುಂತಾದವು ಮನಸ್ಸಾಶ್ರಯಿಸಿದೆ. ಆದ್ದರಿಂದ ಸಮಾಜಕ್ಕೂ ಸಂಸ್ಕೃತಿಗೂ ನಿಕಟ ಸಂಬಂದವಿದೆ. ಸೊರೊಕಿನ್ ಅಭಿಪ್ರಾಯದಂತೆ ಎಲ್ಲ ಸಂಸ್ಕೃತಿಗಳೂ ಚರಿತ್ರೆಯ ನಿಯಮಕ್ಕೆ ಒಳಪಟ್ಟು ಬದಲಾವಣೆ ಹೊಂದಲೇಬೇಕು. ಬದಲಾವಣೆಯೇ ಜೀವನದ ಕುರುಹು ಆದ್ದರಿಂದ ಯಾವ ನಿಜವಾದ ಸಂಸ್ಕೃತಿಯೂ ಶಾಶ್ವತವಾಗಿರಲು ಸಾಧ್ಯವೇ ಇಲ್ಲ.

ಸಂಸ್ಕೃತಿಯಲ್ಲಿ ಒಂದು ಐಕ್ಯತೆ ಮತ್ತು ವ್ಯವಸ್ಥೆ ಇರಲೇ ಬೇಕು. ಸಂಸ್ಕೃತಿಯು ವಿವಿಧ ಮುಖಗಳಲ್ಲಿ ಐಕ್ಯತೆ ಇಲ್ಲದಿದ್ದರೆ ಸಂಸ್ಕೃತಿಯ ನಾಶ. ಸಂಸ್ಕೃತಿಯ ನಿಜವಾದ ಕ್ಷೇತ್ರ ವ್ಯಕ್ತಿಯಲ್ಲಿರುವುದರಿಂದ ವ್ಯಕ್ತಿಗೂ ಸಮಾಜಕ್ಕೂ ಅವಿನಾಭಾವ ಸಂಬಂದವಿದೆ. ಸಂಸ್ಕೃತಿಗಳು ಬದಲಾವಣೆಗೊಳಪಡುತ್ತವೆ. ಬದಲಾವಣೆ ಕೇವಲ ಬಾಹ್ಯ ಕಾರಣಗಳಿಂದ ಆಗಿರಬಹುದು. ಪ್ರಕೃತಿಯು ಮನುಷ್ಯನಿಗೆ ಹೊಸ ಹೊಸ ಸವಾಲನ್ನು ಹಾಕುತ್ತಿರುವದರಿಂದ ಅದನ್ನು ಎದುರಿಸಲು ಪುರುಷ ಪ್ರಯತ್ನ ನಡೆದಾಗ ಸಂಸ್ಕೃತಿಯು ಬದಲಾವಣೆ ಹೊಂದಿದ್ದು ಒಂದು ಸಮಾಜ ವ್ಯವಸ್ಥೆಯಲ್ಲಿಯೂ ಆಂತರಿಕ ಕಾರಣಗಳಿಂದ ಸಂಸ್ಕೃತಿಯು ಮಾರ್ಪಾಡು ಆಗಬಹದು ಅಥವಾ ಬಾಹ್ಯ ಆಂತರಿಕ ಕಾರಣಗಳಿಗೂ ಬದಲಾವಣೆ ಆಗಬಹುದು. ಬದಲಾವಣೆ ಜೀವನದ ನಿಯಮ ಆದ್ದರಿಂದ ಸಂಸ್ಕೃತಿಯ ಔನ್ನತ್ಯಕ್ಕಾಗಲಿ ಅಧಃಪತನಕ್ಕಾಗಲಿ ನಿಜವಾದ ಕಾರಣ ಆಂತರಿಕವೆಂದೇ ಹೇಳಬೇಕು. ಪ್ರಕೃತಿಯು ಸಾಮಾನ್ಯವಾಗಿ ತೀವ್ರ ಬದಲಾವಣೆಗಳನ್ನು ಹೊಂದದೇ ಇದ್ದರೂ ಜನಜೀವನದಲ್ಲಿ ಮಾತ್ರ ಬೇಗ ಬದಲಾವಣೆಗಳು ಹೇಗೆ ಆಗುತ್ತವೆ? ಬಾಹ್ಯ ಪ್ರಪಂಚದ ಪಾತ್ರ ಆತ್ಮಚೈತನ್ಯವನ್ನು ಉತ್ತೇಜಿಸುವುದೇ ಆಗಿದೆ. ಸಮಾಜ ಸಂಸ್ಕೃತಿಯಲ್ಲಿಯೂ ಅವ್ಯಕ್ತವಾಗಿರುವ ಚೈತನ್ಯವೇ ಬಾಹ್ಯ ವಾತಾವರಣವನ್ನು ಮಾರ್ಪಡಿಸುವುದು.

ಭಾರತೀಯ ಸಂಸ್ಕೃತಿಯನ್ನು ಸಮಾಜವನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ನಿರ್ಲಿಪ್ತವಾಗಿ ನೋಡಿದರೆ ಪರಸ್ಪರ ವಿರೋಧಿಯಾದ ಎರಡು ಅಂಶಗಳು ಗೋಚರವಾಗುತ್ತದೆ. ಒಂದು ವಿವಿಧತೆ ಮತ್ತೊಂದು ಏಕತೆ ಇವೆರಡನ್ನೂ ಇಲ್ಲಿ ಏಕಕಾಲದಲ್ಲಿ ನೋಡಬಹುದು. ಈ ಭಾರತೀಯ ಸಮಾಜ

ಮತ್ತು ಸಂಸ್ಕೃತಿಗಳು ಅಸಂಖ್ಯ ವೈರುಧ್ಯಗಳಿಂದ ದಂಗುಬಡಿಸುತ್ತವೆ ತುಂಬಾ ಸಲ ಈ ವೈವಿಧ್ಯಗಳು ಪರಸ್ಪರ ಅಸಂಗತವೂ ಆಗಿರುತ್ತವೆ. ಜನರ ವೇಷಭೂಷಣ, ಮಾತುಕತೆ, ಅವರ ದೈಹಿಕ ರೂಪ, ಆಚರಣೆಗಳು ಜೀವನಮಟ್ಟ, ಆಹಾರ ಪದ್ಧತಿ, ಹವಾಮಾನ, ಭೌಗೋಳಿಕ ಲಕ್ಷಣ ಏನನ್ನೆ ನೋಡಿದರೂ ಎಲ್ಲವೂ ವೈವಿಧ್ಯಮಯವಾಗಿದೆ. ಇಡೀ ದೇಶದ್ದು ಎನ್ನಹುದಾದ ಒಂದು ರಾಷ್ಟ್ರೀಯ ಭಾಷೆಯಾಗಲಿ, ವರ್ಣಮಾಲೆಯಾಗಲಿ ಇಲ್ಲ ಭಾರತೀಯ ಎನ್ನಬಹುದಾದ ಒಂದು ಜನಾಂಗವೂ ಇಲ್ಲ ನೂರಾರು ವಿಧಧ ಜನ ಕಾಣುತ್ತಾರೆ, ಏಕ ರೂಪದ ಆಹಾರ ಪದ್ದತಿಯೂ ಇಲ್ಲ.

ದೇಶದ ವಿವಿಧ ಭಾಗಗಳಲ್ಲಿ ಕಾಣುವ ಬೌತಿಕ ವೈವಿಧ್ಯಗಳಷ್ಟೆ ವ್ಯಾಪಕವಾದ ಸಾಂಸ್ಕೃತಿಕ ವೈವಿದ್ಯತೆಗಳನ್ನು ಭಾರತೀಯ ಸಂಸ್ಕೃತಿಯಲ್ಲಿ ನಾವು ಕಾಣುತ್ತೇವೆ. ಸ್ಪಷ್ಟವಾಗಿ ಕಾಣುವ ಎಲ್ಲಾ ವೈವಿಧ್ಯತೆಗಳ ನಡುವೆಯೂ ನಾವು ಏಕತೆಯನ್ನು ಕಾಣಬಹುದು. ಸಂಸ್ಕೃತಿಯು ಸಮಾಜ ಜೀವನದಲ್ಲಿ ಒಂದು ಉಪಸೃಷ್ಟಿ ಅದರ ಸಾರಲಕ್ಷಣವಾದ ಔಚಿತ್ಯ ಪೂರ್ಣತೆಯು ಏಕಾಂಗಿಯಾಗಿ ಬಾಳುವ ಮನುಷ್ಯನಿಗೆ ಸಾಧ್ಯವಿಲ್ಲ. ತಾವು ಪರಿಪೂರ್ಣತೆಯ ಕಡೆಗೆ ಪ್ರಯಾಣ ಮಾಡುವಲ್ಲಿ ಸಂಸ್ಕೃತಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವುದು ಮನುಷ್ಯ ಗುಣ ಸ್ವಭಾವಗಳಲ್ಲಿ ಒಂದಾಗಿದೆ.

ಯಾವುದೇ ಒಂದು ದೇಶ, ಭೂಖಂಡ ಗುರುತಿಸಲ್ಪದುವುದು ಕೇವಲ ಭೂಮಿಯ ಭೂಭಾಗದಿಂದ ಮಾತ್ರವಲ್ಲ ಅದು ಅಲ್ಲಿಯ ಜನರಿಂದ ಜೀವಂತಿಕೆಯಿಂದ ಸಂಸ್ಕೃತಿಯಿಂದ ಸಂಸ್ಕೃತಿಯು ಸಂವಹನದಿಂದ ಭಾಷೆಯಿಂದ ಗುರುತಿಸಲ್ಪಡುತ್ತವೆ. ಸಂಸ್ಕೃತಿ ಗುರುತಿಸ್ಪಡುವುದು ಅಲ್ಲಿಯ ರೂಡಿ, ಸಂಪ್ರದಾಯ, ಕಲೆ ಎಲ್ಲವನ್ನೂ ತನ್ನಲ್ಲಿ ಮೇಳೈಸಿಕೊಂಡು ಸಂಸ್ಕೃತಿಯ ರೂಪವನ್ನು ಪಡೆಯುತ್ತದೆ. ಭಾರತವು ಒಂದು ದೇಶ ಅನೇಕ ಸಂಸ್ಕೃತಿ ಎನ್ನುವಂತಹ ದೇಶ ಇಲ್ಲಿ ದೇಶಿಯತೆ ಅಥವಾ ಸ್ಥಾನಿಕತೆಯ ಹಿನ್ನೆಲೆಯಲ್ಲಿ ವಿವಿಧ ಸಂಸ್ಕೃತಿಗಳು ಕಂಡು ಬರುತ್ತದೆ.

ವಿಶೇಷವಾಗಿ ಪ್ರಾರಂಭದಿಂದಲೂ ಉತ್ತರಭಾರತ ಮತ್ತು ದಕ್ಷಿಣ ಭಾರತದ ಸಂಸ್ಕೃತಿ ಹಾಗೂ ಭಾಷೆಗಳು ಸಂಪೂರ್ಣವಾಗಿ ವಿಭಿನ್ನವಾಗಿರುವುದು ಕಂಡು ಬಂದರೂ ಯಾವುದೇ ಒಂದು ಸಂಸ್ಕೃತಿಯು ನಿರಂತರವಾಗಿ ವಿವಿಧ ಪ್ರಭಾವಗಳಿಗೊಳಪಟ್ಟು ತನ್ನಲ್ಲಿ ಸ್ಥಳೀಯ ಪ್ರಾದೇಶಿಕ ಲಕ್ಷಣಗಳೊಂದಿಗೆ ಇತರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಪರಿವರ್ತಿತಗೊಳ್ಳುತ್ತವೆ. ಆದರೂ ಅದು ತನ್ನ ಭಾಷೆ ಹಾಗೂ ಸಂಸ್ಕೃತಿಗಳು ವಿಶಿಷ್ಟ ಲಕ್ಷಣಗಳಿಂದ ಪ್ರಾದೇಶಿಕತೆಯ ಹೆಸರಿನೊಂಡಿಗೆ ಗುರುತಿಸಲ್ಪಡುತ್ತದೆ. ಇಲ್ಲಿ ತನ್ನ ತನಕ್ಕೆ ಚ್ಯೂತಿ ಬಾರದಂತೆ ಕಾಲಕ್ಕೆ ತಕ್ಕಂತೆ ಪರಿವರ್ತನಾ ಶೀಲವಾಗಿ ಹೊಸತನಕ್ಕೆ ಹೊಂದಿಕೊಳ್ಳುವ ಮನೋವೈಶಾಲ್ಯದಲ್ಲಿ ಭಿನ್ನತೆಗಳಲ್ಲಿ ಏಕತೆಯನ್ನು ಕಾಣುವ ಒಂದು ಸಮದೃಷ್ಟಿಯಲ್ಲಿ ಸರ್ವಕಾಲಿಕವೂ, ಸರ್ವ ದೇಶಿಕವೂ ಆದ ಒಂದು ಉದಾರ ವಿಶ್ವ ಮತ ತತ್ವದಲ್ಲಿ ಎಲ್ಲಕ್ಕೂ ಮಿಗಿಲಾಗಿ ಬೇರೆ ಸಂಸ್ಕೃತಿಯ ಮುಖ್ಯಾಂಶವನ್ನು ತನ್ನಲ್ಲಿ ಮೈಗೂಡಿಸಿಕೊಂಡು ಅದಕ್ಕೆ ಮಣಿಯದೆ ತನ್ನತನವನ್ನು ಉಳಿಸಿಕೊಂಡು ಹೊರಹೊಮ್ಮುವದು ಸಂಸ್ಕೃತಿಯ ವಿಶಿಷ್ಟತೆಯಾಗಿದೆ.

ದಕ್ಷಿಣ ಭಾರತದಲ್ಲಿ ಇರಾಕ್, ಇರಾನ್ ಮತ್ತು ಮಧ್ಯ ಏಷ್ಯಾದ ಜನರ ವಲಸೆಯು ಒಂದು ಹೊಸ ಸಂಸ್ಕೃತಿಯ ಉದಯಕ್ಕೆ ಕಾರಣವಾಯಿತು. ಅರಬ, ಪರ್ಷಿಯನ್ನರ, ತುರ್ಕಿಗಳ ವಲಸೆಯೂ ದಕ್ಷಿಣ ಭಾರತದ ಸಂಸ್ಕೃತಿಯ ಮೇಲೆ ಭಾರಿ ಪ್ರಭಾವವನ್ನು ಬೀರಿದುದಲ್ಲದೆ ಇತಿಹಾಸದ ಚಲನೆಯ ದಿಕ್ಕನ್ನೆ ಬದಲಾಯಿಸಿತು. ಪರ್ಷಿಯದ ಕರಾವಳಿ ಮತ್ತು ಕ್ಯಾಸ್ಪಿಯನ್ ಸಮುದ್ರದ ಉತ್ತರ ಕರಾವಳಿಯ ಜನ ದಖನ್‌ನಲ್ಲಿ ವಿಫಲವಾಗಿ ವಲಸೆ ಬಂದುದರ ಪರಿಣಾಮ ಇರಾಕ್, ಇರಾನ್ ಮತ್ತು ಅರೇಬಿಯಾದ ಜೊತೆಗಿನ ನೇರ ಸಂಪರ್ಕದಿಂದ ಹಾಗೂ ವಲಸೆಯಿಂದ ಹೊಸಬರ ಆಗಮನವಾಯಿತು. ಅವರನು "ಅಫಾಕಿಗಳು" ಎಂದು ಗುರುತಿಸಲಾಗುತ್ತದೆ. "ದಖನ್ ಸಂಸ್ಕೃತಿಯ" ರೂಪಗೊಳ್ಳುವಿಕೆಯಲ್ಲಿ ಇವರ ಪಾತ್ರ ಪ್ರಮುಖವಾದುದಾಗಿದೆ.

ಸಮುದ್ರ ಮಾರ್ಗವಾಗಿ ಭಾರತದ ಪಶ್ಚಿಮ ಕರವಳಿಗೆ ಬಂದ 'ಸಾಹಸಿಗಳು', 'ಸೈನಿಕರು', 'ವ್ಯಾಪಾರಿಗಳು', 'ಸಂತರು', ಕಲಾವಿದರು, ಕವಿಗಳು ಹೊಸ ಜೀವನ ವಿದಾನ, ಹೊಸ 'ಸಂಸ್ಕೃತಿಯು ಹುಟ್ಟಿಕೊಳ್ಳಲು ಕಾರಣರಾದರು. ಇದು ಕಾಲಾನಂತರ "ದಖನಿ ಸಂಸ್ಕೃತಿ" ಎಂದು ಕರೆಯಿಸಿಕೊಳ್ಳಲ್ಪಟ್ಟಿತು 'ದಖನಿ ಸಂಸ್ಕೃತಿಯ' ಇಸ್ಲಾಂ ಸಂಸ್ಕೃತಿಯ ವೈಶಿಷ್ಟ್ಯಗಳನ್ನೊಳಗೊಂಡಂತಹ ಸಾಂಸ್ಕೃತಿಕ ಲಕ್ಷಣಗಳನ್ನೊಳಗೊಂಡಿದೆ. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಸ್ಥಳಿಯ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಇದು ತನ್ನಲ್ಲಿ ಮೈಗೂಡಿಸಿಕೊಂಡರೂ ಇಸ್ಲಾಂ ಸಂಸ್ಕೃತಿಗೆ ತನ್ನನ್ನು ತಾನು ಮಣಿಸಿಕೊಳ್ಳದೆ ಅದಕ್ಕೆ ಶರಣಾಗದೇ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು 'ದಖನಿ ಸಂಸ್ಕೃತಿ' ಎಂದು ಪ್ರತಿಬಿಂಬಿಸಲ್ಪಡುತ್ತದೆ.

ದಖನಿ ಸಂಸ್ಕೃತಿಯು ಭಾಷೆಯ ಮೇಲೂ ತನ್ನ ಪ್ರಭಾವವನ್ನು ಬೀರಿತು. ವಲಸೆ ಬಂದ ವಿದೇಶಿಯರ ಪಾರ್ಷಿ ಭಾಷೆಯ ಜೊತೆಗೆ ಸ್ಥಳೀಯ ಭಾಷೆಯಾದ ಅರೇಬಿಕ್, ಮರಾಠಿ ಮತ್ತು ಸಂಸ್ಕೃತದಂತಹ ಭಾಷೆಗಳ ಜೊತೆ ಸೇರಿ 'ದಖನಿ ಉರ್ದು" ಭಾಷೆಯ ಹುಟ್ಟಿಗೆ ಕಾರಣವಾಯಿತು. ದಕ್ಷಿಣ ಭಾರತದಲ್ಲಿ ಉರ್ದು ಭಾಷೆಯು  ಪಾರ್ಷಿ ಭಾಷೆ. ಸಂಸ್ಕೃತಿ. ನಾಗರೀಕತೆ, ಕಲೆ, ವಾಸ್ತುಶಿಲ್ಪದ ಬೆಳವಣಿಗೆಗೆ ವಿಪುಲ ಅವಕಾಶವನ್ನು ಒದಗಿಸಿಕೊಟ್ಟಿತು ಇದರಿಂದಾಗಿ ಬಹುಮುಖಿ ಸಂಸ್ಕೃತಿ ಬೆಳೆಯುವಲ್ಲಿ ಸಹಾಯಕವಾಯಿತು. "ದಖನಿ ಉರ್ದು" ಭಾಷೆಯು ಅಪ್ಪಟ ಶುದ್ಧವಾದ ಭಾರತೀಯ ಭಾಷೆಯಾಗಿದೆ. ಉರ್ದು ಬರೆಯಲು ಅರಬ್ಬಿ ಪಾರ್ಷಿ ಲಿಪಿಯನ್ನೆ ಬಳಸಲಾಗುತ್ತದೆ. ದಖನಿ ಉರ್ದುವಿನ ಮೊದಲ ಬರವಣಿಗೆ ಧಾರ್ಮಿಕ ವಿಷಯದ ಆದ್ಯಾತ್ಮದ ಕುರಿತದಾಗಿತ್ತು. ಆಧ್ಯಾತ್ಮದ ವಿಚಾರಗಳನ್ನು ಅವರದೇ ಭಾಷೆಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸುವ ಉದ್ದೇಶದಿಂದ ಧಾರ್ಮಿಕ ಮುಖಂಡರು 'ದಖನಿ ಭಾಷೆ'ಯ ಮೊರೆ ಹೋದರು 'ದಖನಿ' ಒಂದು ಸ್ಥಳೀಯ ಭಾಷೆಯಾಗಿ ಸೈನಿಕರ, ವ್ಯಾಪಾರಿಗಳ ಧಾರ್ಮಿಕ ಪ್ರವಚನಕಾರರ ಸ್ಥಳೀಯರ ಸಂಪರ್ಕ ಸಂವಹನದ ಕೊಂಡಿಯಾಗಿ ಬೆಳೆಯಿತು. ಸಂಪೂರ್ಣ ಭಾರತದ ಸುಮಾರು 200 ಭಾಷೆಗಳಲ್ಲಿ ತನ್ನ ವೈಶಿಷ್ಠಗಳಿಂದ ದಖನಿ ಸಂಸ್ಕೃತಿಯ ವಿಶೇಷತೆಗಳಿಂದ ಗುರುತಿಸಲ್ಪಡುತ್ತದೆ. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಕಲೆ, ಸಾಂಸ್ಕೃತಿಕ

ಕೊಂಡಿಯಾಗಿ ದಖನಿ ಸಂಸ್ಕೃತಿ, ದಖನಿ ಉರ್ದು ಭಾಷೆಯು ವೈಶಿಷ್ಟ್ಯಗಳಲ್ಲಿ ಪ್ರತಿಬಿಂಬಸಲ್ಪಡುತ್ತಿದೆ ಹೀಗೆ ಭಾರತೀಯ ಸಮಾಜವು ಅನೇಕ ಸಂಸ್ಕೃತಿಗಳಿಂದ ಪ್ರಭಾವಿಸಲ್ಪಡುತ್ತಲೇ ತನ್ನ ತನವನ್ನು ಉಳಿಸಿಕೊಂಡು ಸಾವಿರಾರು ವರ್ಷಗಳಿಂದ ಪ್ರವಹಿಸುತ್ತಲೇ ಸಾಗಿದೆ.

## ಆಕರ ಗ್ರಂಥಗಳು

1. ಫಕೀರ್ ಮಹಮ್ಮದ್ ಕಟ್ಟಾಡಿ, ಉತ್ತರ ಕರ್ನಾಟಕದ ಸೂಫಿ ಸಂತರು, ನ್ಯಾಷನಲ್ ಬುಕ್ ಟ್ರಸ್ಟ, ಇಂಡಿಯಾ ನವದೆಹಲಿ, 2017
2. ಸೂರ್ಯನಾಥ ಯು. ಕಾಮತ್(ಸಂ), ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಭಾಗ ಒಂದು, ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 1984
3. ಮಹಮ್ಮದ್ ಅಬ್ಬಾಸ್ ಷೂಸ್ತಿ, ಇಸ್ಲಾಂ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ ಬೆಂಗಳೂರು, 2016.
4. ಅರ್ಜುನಗೋಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ವಿಮೋಚನಾ ಪ್ರಕಾಶನ, ಬೆಳಗಾವಿ, 2000
5. ಚ.ನ.ಶಂಕರರಾವ್, ಭಾರತೀಯ ಸಮಾಜ, ಜೈ ಭಾರತ್ ಪ್ರಕಾಶನ, ಮಂಗಳೂರು, 2005
6. ದೇವು ಪತ್ತಾರ–ಬಹುಮನಿ ಸಾಮ್ರಾಜ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು, 2015.
7. ಎಚ್.ಎಂ.ಮರುಳ ಸಿದ್ದಯ್ಯ, ಸಮುದಾಯ ಸಂಘಟನೆ, ಸಹನಾ ಪ್ರಕಾಶನ, ಬೆಂಗಳೂರು, 1983
8. ರಾಮಚಂದ್ರೇಗೌಡ, ಹಿ.ಸಿ. (ಪ್ರ.ಸಂ) ಕನ್ನಡ ವಿಷಯ ವಿಶ್ವಕೋಶ ಸಂಪುಟ–2, ಮೈಸೂರು ವಿಶ್ವವಿದ್ಯಾನಿಲಯ, 2007
9. ಖಂಡೋಬಾ,ಪಿ.ಕೆ, ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಜಾನಪದ ಸಂಪುಟ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 2011
10. R C Majumdar-THE MUGHUL EMPIRE- The History And Culture Of The Indian People-Bharatiya Vidya Bhavan-Mumbai, 2007.